ಬಿಳಿಗಳ ಪ್ರಸಾಧನ ಮಾಡಲಾಗಿತ್ತು; ಆದರೆ, ಅದರಲ್ಲೂ ತುಂಬ ಸಂಕೀರ್ಣ ಚಿತ್ತಾರಗಳಿರಲಿಲ್ಲ. ಆದರೆ, ಎರಡು ಸಂಗತಿಗಳು ಮಾತ್ರ ತುಂಬ ವಿಶೇಷವೆನ್ನಿಸುವಂತಿದ್ದವು. ಮೊದಲನೆಯದು : ಆ ಪಾತ್ರಿ ತನ್ನ ಮೈಯ ಕೆಲವೇ ಮಾಂಸಖಂಡಗಳನ್ನು ವಿಶಿಷ್ಟವಾಗಿ ನಡುಗಿಸುತ್ತಿದ್ದು ಅದೇ ಆವಾಹನೆಯಾಗಿದ್ದಕ್ಕೆ ಒಂದು ಲಾಂಛನ ಚಲನೆಯೆಂಬತಿತ್ತು.

ನೆನಪಾಯಿತು – ಕೆಲವೇ ತಿಂಗಳ ಹಿಂದೆ ನಾಟಕಶಾಲೆಗೆ ಡೆನ್ಮಾರ್ಕಿನಿಂದ ಬಂದ ರಂಗಕರ್ಮಿಯೊಬ್ಬರು ನಮಗೆಲ್ಲ ಅಭ್ಯಾಸವೊಂದನ್ನು ಮಾಡಿಸುತ್ತ ಹೇಳಿದ್ದರು: 'ನೋಡಿ, ಮನುಷ್ಯನ ಎಲ್ಲ ಚಲನೆ ಮತ್ತು ಚಿಂತನೆಗಳ ಮೂಲಸ್ಥಾನ ಇರುವುದು ಈ ಬೆನ್ನಹುರಿಯ ಮೂಲದಲ್ಲಿ; ಅಲ್ಲಿ ಕಂಪನವನ್ನು ಸೃಷ್ಟಿಮಾಡಿದರೆ, ಅದು ದೇಹ–ಮನಸ್ಸುಗಳನ್ನೆಲ್ಲ ವ್ಯಾಪಿಸಿಕೊಳ್ಳುತ್ತದೆ.' ಅಚ್ಚರಿಯೆಂದರೆ, ಅವರು ತುಂಬ ಪಾರಿಭಾಷಿಕವಾಗಿ ಕಲಿಸಿ, ನಾವು ಅಡ್ಡಾದಿಡ್ಡಿಯಾಗಿ ಮಾಡಿದ್ದ ಅಂಥದೇ ಬೆನ್ನಹುರಿಯ ಚಲನೆಯನ್ನು ಈ ಪಾತ್ರಿ ಲೀಲಾಜಾಲವಾಗಿ ಮಾಡುತ್ತಿದ್ದ. ಅವನ ಚಲನೆಯಲ್ಲಿ ವಿಶೇಷ ಹೆಜ್ಜೆಗಾರಿಕೆಯಿರಲಿಲ್ಲ; ಆದರೆ, ಒಂದು ಭಂಗಿಯಿಂದ ಇನ್ನೊಂದು ಭಂಗಿಗೆ ಆತ ಕ್ಷಿಪ್ರವಾಗಿ ಲಂಘಿಸುತ್ತಿದ್ದ. ಅಂಥ ಆಕ್ರಮಣಕಾರಿ ಚಲನೆಗಳ ಮೂಲಕ ಆ ದೆಯ್ಯ ಒಮ್ಮೊಮ್ಮೆ ನನ್ನ ದಿಕ್ಕಿಗೆ ಬರುತ್ತಿತ್ತು; ಮತ್ತೆ ಹಿಂದೆ ಸರಿಯುತ್ತಿತ್ತು. ನಾನು ಹಿಂದೆ ಹಿಂದೆ ಸರಿದರೆ, ಆ ದೆಯ್ಯವೂ ಮುಂದೆಮುಂದೆ ಬರುತ್ತಿತ್ತು; ಅದು ಅತ್ತಿತ್ತ ಜರುಗುತ್ತಿದ್ದಂತೆ ಸುತ್ತಲಿದ್ದ ಗುಂಪೂ ಅದಕ್ಕೆ ಬೇಕಾಗುವಷ್ಟು ಜಾಗ ಖಾಲಿ ಮಾಡಿಕೊಡುತ್ತಿತ್ತು. ಏನು ನಡೆಯುತ್ತಿದೆ ಎಂದು ಗೊತ್ತಾಗುವ ಮೊದಲೇ ನಾನೂ ತೆಯ್ಯಮ್ ಆಟದೊಳಕ್ಕೆ ಸೇರಿಹೋಗಿದ್ದೆ. ಸುತ್ತ ಸೇರಿದ್ದ ಜನರೆಲ್ಲ ಅದನ್ನು ನೋಡುವಷ್ಟೇ ನನ್ನನ್ನೂ ನೋಡುತ್ತಿದ್ದುದರಿಂದ, ನನ್ನೊಳಗೆ ವಿಚಿತ್ರ ಭಯವೂ ಸಂಭ್ರಮವೂ ಒಟ್ಟೊಟ್ಟಿಗೇ ಆಗುತ್ತಿತ್ತು.

ಇನ್ನೊಂದು ವಿಶೇಷ – ಆ ದೆಯ್ಯದ ಕಣ್ಣು. ತೆಳುಗೆಂಪು ಹಿನ್ನೆಲೆಯ ಬಣ್ಣದ ನಡುವೆ, ಬಿಳಿಯ ರೇಖೆಗಳು; ಮತ್ತು ಕಣ್ಣಿನ ಸುತ್ತ ಕಪ್ಪು ಆವರಣ. ಅದರಿಂದಾಗಿ ಕಣ್ಣುಗಳಿಗೆ ವಿಚಿತ್ರ ಪ್ರಭೆಯೊಂದು ಬಂದಿತ್ತು. ಮಾತ್ರವಲ್ಲ, ಆ ಕಣ್ಣುಗಳನ್ನೊಂದೇ ನೋಡಿದರೂ ಸಾಕು, ಅದು ನಮ್ಮನಿಮ್ಮಂಥ ಸಾದಾ ಮನುಷ್ಯರ ಕಣ್ಣುಗಳಲ್ಲ ಎನ್ನುವ ಏನೋ ಒಂದು ಶಕ್ತಿಯಿತ್ತು. ಒಮ್ಮೊಮ್ಮೆ ಅದು ಭಯಾನಕವಾಗಿಯೂ ಒಮ್ಮೊಮ್ಮೆ ಶಾಂತ–ಕರುಣಗಳ ಸಂಗಮವಾಗಿಯೂ, ಮರುಕ್ಷಣ ವೀರ–ಧೀರ ಭಾವಗಳಿಂದಲೂ ಹೊಳೆಯುತ್ತಿದ್ದ ಆ ಕಣ್ಣುಗಳ ಹಿಂದೆ ಯಾವ ಭಾವನೆಯಿತ್ತು ಎಂಬುದು ಹೇಳುವಂತಿರಲಿಲ್ಲ. ಆದರೆ, ತಾನು ಈ ಲೋಕದ ಒಂದು ಪಾತ್ರವಲ್ಲ ಎಂಬುದನ್ನು ಸ್ಪಷ್ಟವಾಗಿ ಸಾರುವ ಸಾಮರ್ಥ್ಯ ಆ ಕಣ್ಣುಗಳಿಗಿತ್ತು; ಆ ಮೂಲಕ ಅದು ನೋಡುತ್ತಿದ್ದ ನನ್ನನ್ನೂ ಈ ಲೋಕದಿಂದ ಆಚೆಗೆ ಕೊಂಡೊಯ್ದಿತ್ತು.

ಹೀಗೆ ಎಷ್ಟು ಸಮಯ ಕಳೆಯಿತೋ ನೆನಪಾಗುವುದಿಲ್ಲ; ನಡುವೆ ಒಮ್ಮೆ, ನನ್ನ ಎದುರಿಗಿದ್ದ ಹಳ್ಳಿಗನೊಬ್ಬ, ನಾನು ಪರಸ್ಥಳದವನೆಂಬುದು ಗೊತ್ತಾಗಿಯೋ ಏನೋ, ಬೆರಳುಗಳ ಕೈಸನ್ನೆಯಲ್ಲಿ 'ಹಣ... ಹಣ...' ಎಂದು ಸೂಚಿಸಿದ. ಕೂಡಲೇ – ನಮ್ಮೂರ ಹುಲಿವೇಷದ ಕುಣಿತದವರು ಹೀಗೆಯೇ ಜಾತ್ರೆಯಲ್ಲಿ ಅಪರಿಚಿತರಿಗೆ ಅಡ್ಡ ಬಂದು ದಕ್ಷಿಣೆ ವಸೂಲಿ ಮಾಡುತ್ತಿದ್ದುದು ನೆನಪಾಯಿತು. ಅವಸರದಲ್ಲಿ ಜೇಬಿನಲ್ಲಿದ್ದ ಹತ್ತು ರೂಪಾಯಿಯ ನೋಟು ತೆಗೆದು ಅದರ ಕೈಯಲ್ಲಿಟ್ಟೆ. ಮರುಕ್ಷಣವೇ ಆ ಪುಡಿ ದೆಯ್ಯ ತನ್ನ ಚಲನೆಯಲ್ಲೇ ಓಡೋಡುತ್ತ ಬೇರೆಡೆಗೆ ಸರಿದುಹೋಯಿತು. ಒಮ್ಮೆ ಉಸಿರು ಮರಳಿದಂತಾಗಿ ನಿಂತೆ. ಬಳಿಕ ಯೋಚಿಸುವಾಗ, ಅಷ್ಟು ಬೇಗ ಬಿಟ್ಟಿತಲ್ಲ, ನಾನು ಹಣ ಕೊಟ್ಟಿದ್ದು ಹೆಚ್ಚಾಯಿತೇನೋ ಎನ್ನಿಸಿತು; ಮತ್ತೆ ಹಾಗನ್ನಿಸಿದ್ದಕ್ಕೆ ನಾಚಿಕೆಯೂ ಆಗಿ ಗೊಂದಲಗೊಂಡು ಅಲ್ಲೇ ನಿಂತೆ.